**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 24.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ದಿಃ06/08/1986 ರಂದು ಪ್ರತಿವಾದಿ ನಂ.1 ಇವರ ಹೆಸರಿಗೆ ಆದ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.2 ಎಂದು,

ದಿಃ06/08/1986 ರಂದು ಪ್ರತಿವಾದಿ ನಂ.2 ಇವರ ಹೆಸರಿಗೆ ಆದ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.3 ಎಂದು,

ದಿಃ06/08/1986 ರಂದು ಪ್ರತಿವಾದಿ ನಂ.3 ಇವರ ಹೆಸರಿಗೆ ಆದ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.4 ಎಂದು,

ದಿಃ20/01/2009 ರಂದು ಪ್ರತಿವಾದಿ ನಂ.1 ಇವರ ಹೆಸರಿಗೆ ಆದ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.5 ಎಂದು,

ದಿಃ09/06/1997 ರಂದು ಪ್ರತಿವಾದಿ ನಂ.1 ರಿಂದ 3 ಇವರ ಹೆಸರಿಗೆ ಆದ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.6 ಎಂದು,

ಕೆವಿಜಿ ಬ್ಯಾಂಕ್ ಇವರು ನೀಡಿದ ಪ್ರತಿವಾದಿ ನಂ.1 ಇವರ ಖಾತೆಯ ಸ್ಟೇಟ್ಮೆಂಟ್ ಆಫ್ ಅಕೌಂಟ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.7 ಎಂದು,

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಹೂವಿನ ಶಿಗ್ಲಿ ಇವರು ನೀಡಿದ ಒಂದು ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.8 ಎಂದು,

ಕೆನರಾ ಬ್ಯಾಂಕ್ ಇವರು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ನೀಡಿದ ಒಂದು ಎನ್ ಓ ಸಿ.,ಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.9 ಎಂದು,

ತಹಶೀಲ್ದಾರ್ ಶಿರಹಟ್ಟಿ ಇವರು ದೃಢೀಕರಿಸಿದ ಒಂದು ಮ್ಯೂಟೇಶನ್ ಎಕ್ಸಟ್ರ್ಯಾಕ್ಟ್‌ನ ಒಂದು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಡಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್ ಎಂ ಬಿ ವಕೀಲರಿಂದಃ**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಭೀಮಪ್ಪ ಹನಮಂತಪ್ಪ ಕರ್ಜಗಿ ನನ್ನ ತಂದೆಯಾಗಬೇಕು. ನಾನು ಅವರ ಹಿರಿಯ ಮಗನಾಗಿರುತ್ತೇನೆ. ನಾಗಪ್ಪ 2 ನೇಯವರು, ನಿಜಗುಣಪ್ಪ 3 ನೇಯವರು, ನಂತರ ಮಾರುತೆಪ್ಪ 4 ನೇಯವರು ಹಾಗೂ ವಾದಿ 5 ನೇಯವರು ಆಗಿರುತ್ತಾರೆ.ನನ್ನ ಸಹೋದರಿ ನಾಗಮ್ಮ ತೀರಿಕೊಂಡಿರುತ್ತಾರೆ. ಅವರಿಗೆ ನಾಲ್ಕು ಜನ ಮಕ್ಕಳು. ಅವರೆಂದರೆ ಪ್ರತಿವಾದಿ ನಂ.4 ನಾಗಪ್ಪ, ವಿರೂಪಾಕ್ಷಪ್ಪ ತೀರಿಕೊಂಡಿರುತ್ತಾರೆ, ಚಂದ್ರಶೇಖರ ಮತ್ತು ಶ್ರೀಕಾಂತ ಆಗಿರುತ್ತಾರೆ. ಅಸಲು ದಾವೆ ನಂ.309/1988 ರಲ್ಲಿ ನಾವು ಮಾಡಿಕೊಂಡ ರಾಜೀ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಸದರಿ ದಾವೆಯನ್ನು ಪ್ರತಿವಾದಿ ನಂ.3 ಸಲ್ಲಿಸಿದ್ದರು. ಸದರಿ ದಾವೆಯನ್ನು ಪ್ರತಿವಾದಿ ನಂ.3 ನಮ್ಮೆಲ್ಲ ಸಹೋದರ ಸಹೋದರಿಯವರ ಮೇಲೆ ಸಲ್ಲಿಸಿದ್ದರು. ಸರ್ವೆ ನಂ.197 ರ ವಿಷಯವಾಗಿ ಮಾತ್ರ ಸದರಿ ದಾವೆ ಸಲ್ಲಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಡಿ.1 ದಾಖಲೆಯ ಪ್ರಕಾರ ಸದರಿ ದಾವೆ ಸರ್ವೆ ನಂ.197 ರಲ್ಲಿ 72 ಪ್ಲಾಟ್ ಗಳಿಗಾಗಿ ಸಲ್ಲಿಸಿರಬಹುದು ಈಗ ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಆಸ್ತಿಗಳು ಅಸಲು ದಾವಾ ನಂ.309/1988 ರಲ್ಲಿ ಒಳಗೊಂಡಿರಲಿಲ್ಲ ಎಂದರೆ ಸರಿ. ನಿಡಿ.2 ರಿಂದ 4 ರಲ್ಲಿ ತೋರಿಸಿರುವ ಆಸ್ತಿಗಳು 1986 ರಲ್ಲಿ ಖರೀದಿಯಾಗಿರುತ್ತವೆ ಎಂದರೆ ಸರಿ. ನಿಡಿ.1 ರಾಜೀ ಪತ್ರ 1988 ರಲ್ಲಿ ಆಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವಾ ಆಸ್ತಿಯನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ಹೌದು ಅವುಗಳನ್ನು ನಾವು ಖರೀದಿ ಮಾಡಿದ ಕಾರಣ ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಪ್ರಸ್ತುತ ದಾವಾ ಆಸ್ತಿಗಳು ನೀವು ಸ್ವಂತ ಖರೀದಿಸಿದ

ಆಸ್ತಿಗಳೆಂದು ಅವುಗಳನ್ನು ಸೇರಿಸಿ ಆ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಗಳನ್ನು ನಾನು ಖರೀದಿಸಿರುತ್ತೇನೆ ಹಾಗಾಗಿ ನಾನ್ಯಾಕೆ ನಮೂದಿಸಬೇಕು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಪಾಲು ನೀಡಬೇಕಾಗುತ್ತದೆ ಎಂಬ ಕಾರಣದಿಂದ ಉದ್ದೇಶಪೂರ್ವಕವಾಗಿ ಪ್ರಸ್ತುತ ದಾವಾ ಆಸ್ತಿಗಳನ್ನು ಅಸಲು ದಾವಾ ನಂ.309/1988 ರಲ್ಲಿ ಸೇರ್ಪಡೆ ಮಾಡಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಏನು ವಾದಪತ್ರ ಸಲ್ಲಿಸಿರುತ್ತಾರೆಂದು ನನಗೆ ಸಂಪೂರ್ಣ ಮಾಹಿತಿ ಇಲ್ಲ. ಅಸಲು ದಾವಾ ನಂ.309/1988 ರಲ್ಲಿನ ಯಾವುದೇ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಪ್ರಸ್ತುತ ದಾವಾ ಆಸ್ತಿಗಳಲ್ಲಿ ಮುಂದೆ ಪಾಲು ಕೊಡತ್ತೇನೆಂದು ವೃತ ವಾದಿಗೆ ಭರವಸೆ ನೀಡಿ ನಾವು ಅಸಲು ದಾವಾ 309/1988 ರಕಲ್ಲಿ ಒಳಗೊಂಡ ಅಸ್ತಿಗಳಿಗೆ ಮಾತ್ರ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಾಗಿದ್ದರೆ 40 ವರ್ಷಗಳವರೆಗೆ ಅವರು ಸುಮ್ಮನೆ ಇರುತ್ತಿರಲಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಆಲಿಸಿ ಕಾಲಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**